ಬೈ ಬೈ ಎಂದಿತು ಕುರಿ
ಬೈ ಬೈ ಎಂದಿತು ಒಂಟೆ
ಬೈ ಬೈ ಎಂದಿತು ಸಿಂಹ
ಬೈ ಬೈ ಎಂದಿತು ಮಂಗ
ಬೈ ಬೈ ಎಂದಿತು ಅಳಿಲು
ಬೈ ಬೈ ಎಂದಿತು ಕರಡಿ
ಎಲ್ಲರು ಅಂದರು ನೀವಿನ್ನು ಹೊರಡಿ

ತಡೀರಿ ಎಂದನು ಪುಟ್ಟ
ಅಂಟಾರ್ಕಟಿಕಾ ಸ್ಪೆಲ್ಲಿಂಗ್ ಹೇಳ್ರಿ
ಯಾರಲ್ಲುಂಟು ಡಿಕ್ಷನರಿ?

ನನ್ನಲ್ಲಿಲ್ಲ ಎಂದಿತು ಕುರಿ
ನನ್ನಲ್ಲಿಲ್ಲ ಎಂದಿತು ನರಿ

ಸರಿ ಮನೆಗೆ ಹೋಗಿ
ನೋಡ್ಕೊಂಡು ಬರ್ತೀನಿ
ಅದು ವರಗೂ ನೀವಿಲ್ಲೇ ಇರಿ
ಸರಿ ಎಂದುವು ಎಲ್ಲ
ಪುಟ್ಟನಾಮೇಲೆ ಕಾಣಿಸಲಿಲ್ಲ!
ಜನ ಅಂದುಕೊಂಡರು ಬಲು ಕಷ್ಟ
ಈ ಡಿಕ್ಷನರಿ ಎಂಬುದ ಹುಡುಕೋದು
ಅದರಲ್ಲೂ ಇದು ವೆಬ್‌ಸ್ಟರ್ಸ್ ಥರ್ಡ್
ಇಂಟರ್‌ನ್ಯಾಶನಲ್!
ಎತ್ತಿಕೊಳ್ಳೋದಕ್ಕೇ ಹತ್ತು ಜನ ಬೇಕು
ಇನ್ನು ಓದೋದಕ್ಕೆ ಇಪ್ಪತ್ತು!

ಎಳೆಯರ ಆಮೋದ

# ರಾಜ ಯಾಕೆ ಗೆಲ್ಲಲಿಲ್ಲ?



ರಾಜ ಯಾಕೆ ಗೆಲ್ಲಲಿಲ್ಲ?
ಕುದುರೆ ಓಡದ ಕಾರಣ.

ಕುದುರೆ ಯಾಕೆ ಓಡಲಿಲ್ಲ?
ಲಾಳ ಬಡಿಯದ ಕಾರಣ.

ಲಾಳ ಯಾಕೆ ಬಡಿಯಲಿಲ್ಲ?
ಕಮ್ಮಾರ ಬರದ ಕಾರಣ.

ಕಮ್ಮಾರ ಯಾಕೆ ಬರಲಿಲ್ಲ?
ಎಚ್ಚರಾಗದ ಕಾರಣ.

ಎಚ್ಚರ ಯಾಕೆ ಆಗಲಿಲ್ಲ?
ಎಬ್ಬಿಸುವವರಿರದ ಕಾರಣ.

ಎಬ್ಬಿಸುವವರು ಯಾಕಿರಲಿಲ್ಲ?
ಅವರೂ ನಿದ್ರಿಸುತಿದ್ದ ಕಾರಣ.

ಅಲ್ಲಿಗೆ ರಾಜ ಸೋತ
ಕಾರಾಗೃಹದಲಿ ಕೂತ